# ಶ್ರೀಮಧ್ವಾಚಾರ್ಯರ ಸಮಾಜವಾದಿತ್ವ
# Sri Madhwa a Socialist

## Sri Madhwa's approach to Socialism
**ಶ್ರೀಮಧ್ವರು ಸಮಾಜವಾದಿಗಳೇ ? ಸಾಮ್ಯವಾದ ಒಂದು ವಿಮರ್ಶಾತ್ಮಕ ವಿವರಣೆ.**

ಶ್ರೀಮಧ್ವಾಚಾರ್ಯರು ಕೋಮುವಾದಿಗಳು. ವರ್ಣಭೇದ ಪ್ರತಿಪಾದನೆ ಮಾಡುವವರು. ಸಮಾಜವಾದಿಗಳಲ್ಲ. ಸಂಕುಚಿತ ಪ್ರವೃತ್ತಿವುಳ್ಳವರು ಎಂದು ವಿಧವಿಧವಾಗಿ ಅವರನ್ನೂ, ಅವರ ಅನುಯಾಯಿಗಳನ್ನೂ, ಟೀಕಾ ವಿಮರ್ಶೆ ಮಾಡುವವರು ಇದ್ದಾರೆ.

ಆದರೆ ಇದು ಸತ್ಯಕ್ಕೆ ಅತಿದೂರ. ಭಾರತದ ದಾರ್ಶನಿಕರಲ್ಲಿ ವಿಚಾರ ಮಾಡಿದರೆ ಆಚಾರ್ಯ ಶ್ರೀಮಧ್ವರೇ ಹಾಗೂ ಅವರು ಸಿದ್ಧಾಂತ ಜನಸಮಾನತೆಯನ್ನು ಬೋಧಿಸುತ್ತಾರೆ. Madhwa is the only Socialist and propogator of Socialism among the many socalled philosophers. ಅದು ಹೇಗೆ ? ಶ್ರೀಮಧ್ವರು ಸಮಾಜವಾದಿಗಳು. ಎಲ್ಲರನ್ನೂ ಸಮಾನರಾಗಿ ಕಾಣಬೇಕು ಅಂತ ಎಲ್ಲಿ ಹೇಗೆ ತಿಳಿಸಲಾಗಿದೆ ? ಮೊದಲಿಗೆ Socialism ಅಂದರೇನು ? ತಿಳಿಯೋಣ.

Socialism does not imply that all are equal and to be treated as such Socialism means :

"Each according to his capacity and each according to his need" ಎಂದು ಪಾಶ್ಚಿಮಾತ್ಯ ಪ್ರಸಿದ್ಧ ವಿದ್ವಾಂಸರು ಹೇಳಿದ್ದಾರೆ.

ಮನುಷ್ಯನ ಯೋಗ್ಯತೆಗನುಗುಣವಾಗಿ ಮತ್ತೂ ಅವನ ಅವಶ್ಯಕತೆಗೆ ತಕ್ಕಂತೆ ಲಭಿಸುವುದು. ಅಂದ ಮೇಲೆ Socialism ಅಂದರೆ ಸಮ. ಎಲ್ಲರೂ ಒಂದೇ ಅಂತ ಹೇಳಲೂ ಬರುವುದಿಲ್ಲ. ತಾರತಮ್ಯ ಪ್ರಕಾರವೇ ನಡೆಯುತ್ತದೆ. ಈಗಿನ ಜನಾಂಗ ಹೇಳಿದಂತೆ Socialism ಅಂದರೆ ನಾವೆಲ್ಲಾ ಒಂದೇ ಅಂತ ಕೂಗುತ್ತಾರಲ್ಲಾ. ಅವರ ನಿಜಾರ್ಥ ತಿಳಿಯದೇ ಹೇಳುತ್ತಾರೆ.

Socialism ಅಂದರೆ ತಾರತಮ್ಯ ಪ್ರಕಾರ ಫಲಪ್ರಾಪ್ತಿ, ಸ್ಥಾನಮಾನಗಳು ಇರುವುದು – ಹಾಗೇ ಇರಬೇಕು.

ಈ ವಿಷಯ ಶ್ರೀಮದಾಚಾರ್ಯರು ಶತಮಾನಗಳ ಹಿಂದೆಯೇ ಹೇಳಿದ್ದಾರೆ. ಉಚ್ಛ, ಮಧ್ಯ, ನೀಚವೆಂದು. ಸಾತ್ವಿಕ, ರಾಜಸ, ತಾಮಸ ಇವ್ರೂ ಸಹ ಅನಾದಿಕಾಲಗಳಿಂದ ನಡೆದುಬಂದಿದೆ. ಶ್ರೀಮದಾಚಾರ್ಯರು ಹೀಗೆ ತಿಳಿಸಿದಾಗ, ಅವರು ಭೇದ ಬೋಧಿಸುತ್ತಾರೆ ಅಂತ ಅಪವಾದ ಮಾಡುತ್ತಾರೆ. ಇದು ಸರಿಯಲ್ಲ.

ಶ್ರೀಮಧ್ವರು ಹೇಳಿದ್ದು ಸ್ವಕಲ್ಪನೆಯಲ್ಲ. ಪ್ರಮಾಣ ಆಧಾರ ಸಹಿತವಾಗಿರುತ್ತೆ.

ಕೆಲವರು ಹೀಗೆ ಹೇಳುತ್ತಾರೆ. "ಶಂಕರಾಚಾರ್ಯರು ಎಲ್ಲರೂ ಬ್ರಹ್ಮರಾಗಿರುತ್ತಾರೆ. ಜೀವ ಜೀವರಿಗೂ ಭೇದವೇ ಇರುವುದಿಲ್ಲ"ವೆನ್ನುವಾಗ ಮಧ್ವಾಚಾರ್ಯರು ಮಾತ್ರ ಜೀವರಲ್ಲಿ ಭೇದ ಹೆಚ್ಚು ಕಡಿಮೆ ಇದೆ ಅಂತ ಹೇಳಿದ್ದು ಸರಿಯಲ್ಲ ಅಂತ.

ಇನ್ನೂ ಕೆಲವರು ಬಸವಣ್ಣ ನೋಡಿ "ಎಲ್ಲರೂ ಒಂದೇ ಸಮರು" ಎಂದಿದ್ದಾನೆ. ಹಾಗೇನೇ, ಬುದ್ಧಧರ್ಮವು ತಿಳಿಸುತ್ತದೆ. ಅದಕ್ಕಾಗಿ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸಿ ಹಿಂದೂ ಧರ್ಮವನ್ನು ದೂಷಿಸಿದ ಎಂದಿರುತ್ತಾರೆ.

ಬಸವಣ್ಣ ಹಿಂದೂ ಧರ್ಮವನ್ನು ತ್ಯಜಿಸಲಿಲ್ಲ. ಅಲ್ಲಿ ಕೆಲ ವಿಕೃತ ವಿಚಾರಗಳನ್ನು ಟೀಕೆ ಮಾಡಿದ. ಎಲ್ಲರೂ ಒಂದೇ ಅಂತ ಹೇಳಿದನೇ ಹೊರತು ತಾನು ಆಚರಿಸಲಿಲ್ಲ. ಅವರಲ್ಲಿಯೂ ವೈಷಮ್ಯ ಭೇದ ಇದೆ. ಇನ್ನೂ ಅಂಬೇಡ್ಕರ್ ಬೌದ್ಧ ಧರ್ಮವನ್ನು ಸ್ವೀಕರಿಸಿದನೇ ಹೊರತು ಹಿಂದೂ ಆಗಿಯೇ ಬದುಕಿದ್ದ. ಆದರೆ ಅವನು, ಅವನ ಅನುಯಾಯಿಗಳು ಎಲ್ಲರೂ ಸಮ ಎಂದು ಹೇಳುತ್ತಾರೆ ವಿನಃ ಕಾರ್ಯಗತ ಮಾಡಲಿಲ್ಲ. ಹೀಗಿರುವಾಗ ಅವರೆಲ್ಲಾ ಹೇಳಿದ್ದಂತೆ ಎಲ್ಲರನ್ನೂ ಸಮಾನರೆಂದೂ ಕಾರ್ಯಗತ ಮಾಡಲಿಲ್ಲ, ಮಾಡುತ್ತಿಲ್ಲ.

ಶ್ರೀಮಧ್ವರು ಹೇಳಿದ್ದು ಪ್ರಾಮಾಣಿಕವಾಗಿ Pragmatic and a Reality ಆಗಿರುವುದು. ಯಾವ ವರ್ಗವನ್ನು, ಪಂಗಡವನ್ನು ದೂಷಿಸಿಲ್ಲ. ಹಾಗಾದರೆ, ಮಧ್ವಮತದಲ್ಲಿ ವೈಷಮ್ಯವಿದೇ ಅಂತ ಹೇಳುತ್ತಾರಲ್ಲಾ ಅಂದರೆ,

In a Society, there should be gradation and distribution of work for a smooth functioning. There should not be any complaint among various organisations. ಇದು ಜಗತ್ತು ಸೃಷ್ಟಿಯಾದಾಗಿನಿಂದ ಉಚ್ಛ, ನೀಚ, ಭಾವ ಇರುವುದು. ಈಗಲೂ ಇದೆ, ಇರಬೇಕು.

ಶ್ರೀಮದಾಚಾರ್ಯರು ಇಂಥ ವ್ಯವಸ್ಥೆಯನ್ನು ಅವರು ಮಾಡಿಲ್ಲ. ವೇದ, ಪುರಾಣ, ಇತಿಹಾಸಗಳಲ್ಲಿರುವುದನ್ನು, ನಡೆದು ಬಂದಿದ್ದನ್ನು ಒತ್ತಿ ಹೇಳಿದರೇ ವಿನಃ ಅನ್ಯಥಾ ಇಲ್ಲ.



Socialism does not profess equality among the human beings. To ignore gradation and individual capability is to negate the very concept of Socialism. Sri Madhwa professed such a Social organisation. He never condemned or negated the well knit social function. Whereas pseudo-Socialist cry out equality of all human beings but in practice they work against their own sayings. ಮಾನವರೆಲ್ಲಾ ಒಂದೇ ಭೇದವಿಲ್ಲ ಅಂತ ಹೇಳುತ್ತಾರೆ. ನಡತೆಯೇ ವಿರುದ್ಧವಾಗಿರುವುದು.

ಶ್ರೀ ಮಧ್ವರು ತಾರತಮ್ಯವಿದೆ ಇರಬೇಕು. ಅವರವರ capability - capacityಗೆ ಅನುಗುಣವಾಗಿ ಸ್ಥಾನ ಮಾನಾದಿಗಳು ಇರುವುದು.

ಒಂದು ಸಲ ತನ್ನ ಸ್ನೇಹಿತ ಹೇಳಿದ. ಮಾನವರೆಲ್ಲಾ ಒಂದೇ ಇರಬೇಕಾದರೆ ಅವರಲ್ಲಿ ನೀನು ಉತ್ತಮ, ನೀನು ಅಧಮ ಅಂತ ಹೇಳಿ ವಿಂಗಡಿಸುವುದು ಸಮಾಜವನ್ನು ಒಡೆಯುವುದು ಸರೀನಾ ? ಎಲ್ಲರಲ್ಲಿ ಹರಿಯುವ ರಕ್ತ ಕೆಂಪೇ ಆಗಿರುವುದು. ಬ್ರಾಹ್ಮಣ, ವೈಶ್ಯ, ಶೂದ್ರ ಇತ್ಯಾದಿಗಳಲ್ಲಿ ಹರಿಯುವ ರಕ್ತ ಕೆಂಪಾಗಿರುವುದು ಅಲ್ಲವೇ ? ಅಂದ.

ನಿನ್ನ ವಾದ ಅರ್ಥಹೀನ, ದಡ್ಡನ ಮಾತು. ಎಲ್ಲರಲ್ಲಿ ಹರಿಯುವ ರಕ್ತವು ಕೆಂಪೇ ಆಗಿದೆ ಅಂತ ಹೇಳಿದ್ದು ವೈಜ್ಞಾನಿಕವಾಗಿ ವಿಚಾರ ಪರೀಕ್ಷೆ ಮಾಡಿರಿ. ಎಲ್ಲರ ರಕ್ತವು ಒಂದೇ (ಕೆಂಪುಬಣ್ಣ ಇರಬಹುದು) ಆಗಿರುದಿಲ್ಲ. A, B, O, RH Blood Groups ಇರುವುದು. ಒಬ್ಬನಲ್ಲಿ RH Group ಇದ್ದಾಗ ಇತರೇ Group ರಕ್ತ ಕೊಡಲು ಬರುವುದಿಲ್ಲ. ಹಾಗೇನಾದರೂ Grouping ಮಾಡದೇ ರಕ್ತ ಕೊಟ್ಟರೆ ಅವನ ಮರಣ ಸಿದ್ಧ. ಕೇಳಿ ವೈದ್ಯರನ್ನು ಬೇಕಾದರೆ.

ಶ್ರೀಮದಾಚಾರ್ಯರು ಸಾತ್ವಿಕ, ರಾಜಸ, ತಾಮಸರಿದ್ದಾರೆ ಎಂದಾಗ ಅವರು ವಿವಿಧ ಜೀವರಲ್ಲಿ ಈ ರೀತಿ ಇರುತ್ತದೆ. ಆಗಲಿ. ಮನುಷ್ಯ ದೇಹವನ್ನು ವಿಂಗಡಿಸಿಲ್ಲ. ಇದನ್ನೇ ಶ್ರೀಕೃಷ್ಣ ಗೀತೆಯಲ್ಲಿ ಗುಣತ್ರಯ ವಿಭಾಗ ಯೋಗದಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾನೆ. ತಾನು ಆ ರೀತಿ ಸೃಷ್ಟಿಸಿಲ್ಲ. ಆ ಗುಣಗಳು ಪ್ರಕೃತಿದತ್ತವಾದದ್ದು. **"ಚಾತುರ್ವರ್ಣಂ ಮಯಾಸೃಷ್ಟೋ ಗುಣಕರ್ಮ ವಿಭಾಗಃ"** ಇಲ್ಲಿ ಮಯಾಸೃಷ್ಟಃ ಅಂತ ಕೃಷ್ಣ ಹೇಳಿದ್ದು ಗುಣಕರ್ಮಗಳಾನುಸಾರವೇ ಎಂದು ಹೇಳಿದ್ದಾರೆ.

ಗುಣ + ಕರ್ಮಗಳನ್ನು ಗುಣವಾಗಿ ಅಂದಾಗ He explained and highlighted what was existing in the nature. ಮಾನವ ದೇಹ ಪಂಚಭೂತಾತ್ಮಕವಾಗಿರುವುದು. ಪ್ರಕೃತಿಯಿಂದ ನಿರ್ಮಿಸಿದ್ದು. ಪ್ರಕೃತಿ ಅಂದರೆ ಚಿತ್ ಮತ್ತು ಅಚಿತ್ ಎಂದು ಎರಡು ವಿಧ. ಅಚಿತ್ (ಜಡ) ಎಂದಾಗ ಮಣ್ಣು, ನೀರು, ಗಾಳಿಗಳಿಂದ ಮಾಡಿದ್ದ ದೇಹ ಅಂತಹ

ದೇಹವು ಜಡಪ್ರಕೃತಿ ಗುಣಗಳಿಂದ ಕೂಡಿರುವುದು. ಇದು ಸ್ವಾಭಾವಿಕ, ಸಹಜ. ಸ್ವಭಾವ ಅನಾದಿ – ನಿತ್ಯ. ಹಾಗೇ ಸಾತ್ವಿಕರು ಅಂದಾಗ ಸತ್ವ ಗುಣವುಳ್ಳವರು.

ರಾಜಸರೂ ತಾಮಸರೂ ಹಾಗೆ ಅವರವರ ಗುಣವಿಶಿಷ್ಟರಾಗಿರುತ್ತಾರೆ. ಗುಣಗಳನ್ನು ಜೋಡಿಸಲು ಹೊಂದಾಣಿಕೆ ಮಾಡಲು ಆಗುವುದಿಲ್ಲ. ಅವು ಸ್ವಭಾವ ಗುಣಗಳು. ಹಾಗೇ ಅವರ ಸ್ವಭಾವವೂ ಇರುತ್ತದೆ. ಕೃಷ್ಣ ಸ್ವಭಾವ ಜೀವರಿಗೇ ಎಂದಿದ್ದಾನೇ ಹೊರತು ಮನುಷ್ಯರಿಗೆ ಅಂತ ಅಂದಿಲ್ಲ.

ಇಲ್ಲಿ ಮುಖ್ಯ ವಿಷಯವೇನೆಂದರೆ **ನೀಚೋಚ್ಛಭಾವಂಗತಾಃ** ಎಂದಾಗ ಜೀವ ಸ್ವಭಾವವೇ ತನ್ನಿರ್ಮಿತ ದೇಹ ಗುಣಗಳು. ಈ ರೀತಿ ವಿಭಾಗ ಆಚಾರ್ಯರು ಮಾಡಿದ್ದಲ್ಲ. ಶೃತಿ ಶೃತಿಗಳಲ್ಲಿ ಹೇಳಿದ್ದನ್ನೇ ತಿಳಿಸಿರುತ್ತಾರೆ. "ದೊಡ್ಡವರು ದೊಡ್ಡವರೇ, ಅವರು ಅವರೇ" ಇದು ವಸ್ತುತಃ ಸತ್ಯ. ಜೀವನು ನಿತ್ಯ ಅನುಷ್ಠಾನ. ಹಾಗೇ ಮಾಡಬೇಕು, ಮಾಡಲಾಗಿದೆ ಎಂದು. ಇದನ್ನೇ '**ಸಮ**' ಎನ್ನಬೇಕು.

ರಾಷ್ಟ್ರಪತಿ ಒಬ್ಬನೇ. ಎಲ್ಲಾ ದೇಶದ ಪ್ರಜೆಗಳು ರಾಷ್ಟ್ರಪತಿಗಳಾಗುತ್ತಾರೆಯೇ ? ಎಂದಿಗೂ ಸಾಧ್ಯವಿಲ್ಲ. ಅಂತೆಯೇ ಪ್ರಧಾನಿ ಇತರ ಮಂತ್ರಿಗಳು ಅವರ ನಂತರ Chief Secretary, Secretary, Deputy Secretary, Office Manager, Head Clerk, Clerk, Servants ಅಂತ ಇರಬೇಕಾದರೆ ಅವರ capacity, capability ಗನುಗುಣವಾಗಿ ವಿಂಗಡ ಮಾಡಿ ತಕ್ಕಂತೆ ವೇತನ ಸೌಕರ್ಯ ಸೌಲತ್ತು ಕೊಡಲಾಗಿದೆ. ಆದ್ದರಿಂದ ಸಮ ಅಂದರೆ All are equal, no distinction, ಅಂತ ಅರ್ಥವಾಗುವುದಿಲ್ಲ. Distinguish between the Social Order tends to harmonious functioning.

ಇದಕ್ಕೆ ಒಂದು ಐತಿಹಾಸಿಕ ದೃಷ್ಟಾಂತ.

ವಿಜಯನಗರ ಸಾಮ್ರಾಜ್ಯ ಚಕ್ರವರ್ತಿ ಶ್ರೀಕೃಷ್ಣದೇವರಾಯನ ಆಡಳಿತ ಕಾಲ.

ಕೃಷ್ಣದೇವರಾಯನಿಗೆ ಮುಖ್ಯಮಂತ್ರಿ ತಿಮ್ಮರಸು ಎಂಬಾತನಿದ್ದ. ರಾಯನಿಗೆ ಸೇವಕ. ಅರಮನೆಯ ರಾಯನ ಎಲ್ಲಾ ಕೆಲಸ ಮಾಡುತ್ತಿದ್ದ. ರಾಘವಯ್ಯ ಅಂತ ಹೆಸರು. ಒಮ್ಮೆ ರಾಘವಯ್ಯನಿಗೆ ಬುದ್ಧಿ ಹುಟ್ಟಿತು. "ನಾನು ರಾಜನ ಆಪ್ತ ಸೇವಕ. ಬೆಳಗ್ಗಿನಿಂದ ರಾತ್ರಿ ೧೦–೦೦ ರಿಂದ ೧೧–೦೦ರವರೆಗೆ ರಾಜನ ಸೇವೆ ಸರ್ವ ರೀತಿಯಿಂದ ಮಾಡುತ್ತೇನೆ. ನನಗೆ ತಿಂಗಳಿಗೆ ಹತ್ತು ವರಾಹಗಳು ಸಿಗುತ್ತೆ. ಆದರೆ, ಮಹಾಮಂತ್ರಿ ತಿಮ್ಮರಸಿಗೆ ರೂ. ೧೦,೦೦೦ ವರಾಹಗಳು ಸಲ್ಲುತ್ತದೆ. ಮಹಾಮಂತ್ರಿ ದಿನಕ್ಕೊಂದು ಬಾರಿ ಬಂದು ರಾಜನೊಂದಿಗೆ ವಿಚಾರ ಮಾಡುತ್ತಾನೆ. ಅಬ್ಬಬ್ಬಾ ಅಂದರೆ ಒಂದು ತಾಸು ಮಾತ್ರ. ಆತನಿಗೆ ರೂ. ೧೦,೦೦೦ ವರಾಹಗಳು." ಬೆಳಗಿನಿಂದ ರಾತ್ರಿಯವರೆಗೂ ಅರಮನೆಯಲ್ಲಿ ರಾಜನ



ಅಗತ್ಯ ಎಲ್ಲಾ ಕೆಲಸ ಮಾಡುತ್ತೇನೆ. ಆದರೆ, ನನಗೆ ಹತ್ತು ವರಾಹಗಳು ಮಾತ್ರ. ಇದು ಎಲ್ಲಿಯ ನ್ಯಾಯ ?

ತಿಮ್ಮರಸು ರಾಜನನ್ನು ದಿನಕ್ಕೊಂದು ಬಾರಿ ಮಾತ್ರ ಅದು ಒಂದು ತಾಸು ಮಾತನಾಡಿಸಿ ಹೋಗುತ್ತಾನೆ. ಅಂತಹವನಿಗೆ ೧೦,೦೦೦ ವರಾಹಗಳು. ಇದು ತೀರ ಅನ್ಯಾಯವೆಂದು ತಿಳಿದು ನಾಳೆ ರಾಜನನ್ನೇ ಕೇಳೋಣ ಅಂತ ನಿರ್ಧರಿಸಿದ. ಮಾರನೆಯ ದಿನ ಬೆಳಿಗ್ಗೆ ಮಹಾರಾಜ ನಿತ್ಯ ಕಾರ್ಯಕ್ರಮಗಳನ್ನು ಮುಗಿಸಿ ಉಡುಗೆ ತೊಡುಗೆಗಳಿಂದ ಅಲಂಕೃತನಾದ. ಇದೇ ಸಮಂಜಸವೆಂದು ಮೆಲ್ಲಗೆ ರಾಜನಲ್ಲಿ ಪ್ರಸ್ತಾಪ ಮಾಡಿ ತನಗೆ ಅನ್ಯಾಯವಾಗುತ್ತಿದೆ ಎಂದು ಅಸಮಾಧಾನವಾಗಿ ಹೇಳಿದ.

ಮಹಾರಾಜನಿಗೆ ಆಶ್ಚರ್ಯವಾಯಿತು. ರಾಘವಯ್ಯ ಏಕೆ ಹೀಗೆ ಕೇಳುತ್ತಾನೆ. ಓಹೋ! ಅವನಿಗೆ ಯಾರೋ ಬೋಧನೆ ಮಾಡಿರಬೇಕು ಎಂದು ಅವನಿಗೆ ಹೇಳಿದ. ನೋಡೋಣ. ವಿಚಾರ ಮಾಡುತ್ತೇನೆ ಅಂದ. ಆಮೇಲೆ ಎರಡು ಮೂರು ದಿನಗಳಾಯಿತು. ಅಂದು ಬೆಳಿಗ್ಗೆ ೧೧–೦೦ ಗಂಟೆಗೆ ರಾಜನು ಅರಮನೆಯ ಉಪ್ಪರಿಗೆಯಲ್ಲಿ ಕುಳಿತಿದ್ದ. ತನ್ನ ನಗರವನ್ನು ವೀಕ್ಷಿಸುತ್ತಾ ಇರಬೇಕಾದರೆ ಅರಮನೆಯ ಮುಂದಿನ ಬೀದಿಯಲ್ಲಿ ಒಂದು ಮೆರವಣಿಗೆ ಹೋಗುತ್ತಿತ್ತು. ಮದುವೆಯ ಪರಿವಾರ ದಿಬ್ಬಣ ಹೊರಟಿತ್ತು. ಆಗ ರಾಜನಿಗೆ ಇದು ಒಳ್ಳೆಯ ಸಮಯವೆಂದು "ರಾಘವಯ್ಯ ಇಲ್ಲಿ ಬಾ" ಎಂದ. ಕೆಲಸಮಾಡುತ್ತಿದ್ದವ ಬಂದ. ಅವನನ್ನು ಕರೆದು ಬೀದಿಯ ಕಡೆ ಕೈತೋರಿಸಿ, ರಾಘವಯ್ಯ ನೋಡು ಏನೋ ಜನಸಂಧಣಿ ಕೇಳಿ ಬಾ ಎಂದ. ಸರಿ ರಾಘವಯ್ಯ ಕೂಡಲೇ ಕೆಳಗಿಳಿದು ಮೆರವಣಿಗೆ ಕಡೆ ಹೋಗಿ ಮತ್ತೆ ಬಂದು "ಮಹಾಪ್ರಭು, ಆ ದಿಬ್ಬಣ ಮೆರವಣಿಗೆಯಾಗಿದೆ" ಎಂದು ಹೇಳಿದನು. ರಾಜ ಹೌದಾ, ಆದರೆ ಮೆರವಣಿಗೆ ಏಕೆ ? ಯಾರದ್ದು ? ಎಂದ. ತಕ್ಷಣ ರಾಘವಯ್ಯ ಕೆಳಗಿಳಿದು ಅಲ್ಲಿ ಹೋಗಿ ಮತ್ತೇ ಬಂದು ಅದು ಮದುವೆಗಾಗಿ ಹೊರಟಿದೆ ಎಂದ.

ಮದುವೆಯ ಮೆರವಣಿಗೆಯಾ ? ಹಾಗಾದರೆ ಯಾರ ಮೆರವಣಿಗೆ ? ರಾಘವಯ್ಯ ಕೆಳಗಿಳಿದು ಹೋಗಿ ಬಂದು ಮೆರವಣಿಗೆ ವರನ ಕಡೆಯದ್ದು ಎಂದ.

ರಾಜ : ವರ ಯಾರು ?

ರಾಘವಯ್ಯ : ಮತ್ತೆ ಕೆಳಗಿಳಿದು ಹೋಗಿ ವಾಪಸ್ಸು ಬಂದು ವರನ ಹೆಸರು ಶಾಮಭಟ್ಟರು ಎಂದ.

ರಾಜ : ಶಾಮಭಟ್ಟ ಯಾರು ? ತಂದೆ ಯಾರು ?

ರಾಘವಯ್ಯ : ಮತ್ತೆ ಕೆಳಗಿಳಿದು ಬಂದು ವರನ ತಂದೆ ಕೃಷ್ಣಭಟ್ಟರು ಎಂದ.

ರಾಜ : ಕೃಷ್ಣಭಟ್ಟರು ಯಾರು ?

ರಾಘವಯ್ಯ : ಮತ್ತೆ ಕೆಳಗಿಳಿದು ಬಂದು ಕೃಷ್ಣಭಟ್ಟರು ವಿಠಲದೇವಾಲಯದ ಅರ್ಚಕರು ಎಂದ.

ರಾಜ : ಅವರು ಎಲ್ಲಿಗೆ ಹೋಗುತ್ತಿದ್ದಾರೆ ?

ರಾಘವಯ್ಯ : ಪುನಃ ಕೆಳಗಿಳಿದು ಹೋಗಿ ಬಂದು ಅವರು ಮದುವೆಯ ಮಂಟಪಕ್ಕೆ ಹೋಗುತ್ತಿದ್ದಾರೆ ಅಂದ.

ರಾಜ : ವಧು ಯಾರು ?

ರಾಘವಯ್ಯ : ಮತ್ತೆ ಕೆಳಗಿಳಿದು ಹೋಗಿ ಹೆಣ್ಣು ಆನಂದಭಟ್ಟರ ಮಗಳು.

ರಾಜ : ವಧುವಿನ ಹೆಸರೇನು ?

ರಾಘವಯ್ಯ : ಮತ್ತೆ ಕೆಳಗಿಳಿದು ಹೋಗಿ ಬಂದು ಕೋಮಲಾಂಗಿ ಅಂತ ಹೇಳಿದ.

ರಾಜ : ಮದುವೆಯ ಮಂಟಪ ಎಲ್ಲಿದೆ ?

ರಾಘವಯ್ಯ : ಮತ್ತೆ ಕೆಳಗಿಳಿದು ಹೋಗಿ ಬಂದು ಮದುವೆ ಕಾಮಲಾಪುರದಲ್ಲಿ ಆಗುತ್ತದೆ.

ರಾಜ : ಮುಹೂರ್ತ ಎಷ್ಟು ಹೊತ್ತಿಗೆ ಕೇಳು ?

ರಾಘವಯ್ಯ : ಮತ್ತೆ ಕೆಳಗಿಳಿದು ಬಂದು ಈ ದಿನ ಮಧ್ಯಾಹ್ನ ೧೨-೩೦ ಗಂಟೆಗೆ ಮೂಹೂರ್ತವಂತೆ.

ರಾಜ : ವರನ ಕಡೆಯವರು ಹೆಣ್ಣಿಗಾಗಿ ಏನು ತಂದಿದ್ದಾರೆ ?

ರಾಘವಯ್ಯ : ಮತ್ತೆ ಕೆಳಗಿಳಿದು ಹೋಗಿ ಬಂದು ವಸ್ತ್ರ ಭೂಷಣಗಳನ್ನು ತಂದಿದ್ದಾರೆ. ಕೊಡುತ್ತಾರೆ.

ರಾಜ : ಮೆರವಣಿಗೆ ಅರಮನೆಯ ಮುಂದೆ ಏಕೆ ಸಾಗುತ್ತಿದೆ ?

ಇಷ್ಟು ಹೊತ್ತಿಗೆ ರಾಘವಯ್ಯನಿಗೆ ಸುಸ್ತೋಸುಸ್ತು. ಮಹಡಿಯಿಂದ ಸುಮಾರು ಹತ್ತು ಹದಿನೈದು ಸಲ ಹೋಗಿ ಬರುವುದು, ಮೈ ಬೆವರುವುದು ಎಲ್ಲಾ ನಡೆಯಿತು. ರಾಜನಿಗೆ ಅವನ ಅವಸ್ಥೆ ನೋಡಿ ಇವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ರಾಘವಯ್ಯ ಸುಸ್ತಾಗಿದೆ. ಇಲ್ಲೇ ಕೂಡು. ವಿಶ್ರಾಂತಿ ತಗೋ. ನೀರು ಕುಡಿ ಅಂತ ಹೇಳಿ ಇತರೆ



ಕಾವಲುಗಾರರನ್ನು ಕರೆದು ಮಂತ್ರಿ ತಿಮ್ಮರಸುವನ್ನು ಕರೆಸಿದ. ತಿಮ್ಮರಸು ಬಂದೊಡನೆಯೇ ಮಹಾರಾಜ ಮೆರವಣಿಗೆ ಕಡೆ ಕೈಮಾಡಿ ಏನೆಂದು ಕೇಳಿದ.

ತಿಮ್ಮರಸು ಸ್ವಲ್ಪ ಸಮಯದಲ್ಲಿ ಅಲ್ಲಿ ಹೋಗಿ ಬಂದು ಸವಿಸ್ತಾರವಾಗಿ ವರನ ಕಡೆ, ಕನ್ಯಾ ಕಡೆ ಮದುವೆ ಮಂಟಪ, ಉಡುಗೊರೆ ಕೊಡುವುದು, ತೆಗೆದುಕೊಳ್ಳುವುದು, ಎಷ್ಟು ಗಂಡು ಹೆಣ್ಣು, ಗೋತ್ರ, ಲಗ್ನ ಮುಹೂರ್ತಕ್ಕೆ ಹೋಗುತ್ತಿದ್ದಾರೆ, ತತ್ಪೂರ್ವದಲ್ಲಿ ಮಹಾರಾಜರ ದರ್ಶನ, ಆಶೀರ್ವಾದ ಪಡೆಯಲು ಅರಮನೆ ಅಂಗಳದಲ್ಲಿ ಬರುತ್ತಿದ್ದಾರೆ ಎಂದು ಪೂರ್ಣ ವಿವರ ಕೊಟ್ಟ.

ಆಗ ಮಹಾರಾಜ ರಾಘವಯ್ಯನ ಕಡೆ ದಿಟ್ಟಿಸಿ ನೋಡಿದ. ಮಾತನಾಡಲಿಲ್ಲ. ರಾಘವಯ್ಯನಿಗೆ ಅರ್ಥವಾಯಿತು. ಎಂಥಾ ಮೂರ್ಖ ಪ್ರಶ್ನೆ ಮಹಾರಾಜನಲ್ಲಿ ಮಾಡಿದೆ. ಮಹಾರಾಜ ನನ್ನ ಯೋಗ್ಯತೆಗೆ ತಕ್ಕಂತೆ ಸಂಭಾವನೆ ಕೊಡುತ್ತಾನೆ. ತಿಮ್ಮರಸುವಿನ ಯೋಗ್ಯತೆ ದೊಡ್ಡದು. ಆದ್ದರಿಂದ ಮಹಾರಾಜ ಯಾರಿಗೂ ಅನ್ಯಾಯ ಮಾಡುವುದಿಲ್ಲವೆಂದು ತಿಳುವಳಿಕೆಯಾಗಿ ಲಜ್ಜಿತನಾದ.

ಈ ಕಥೆಯಿಂದ ಭಗವಂತನನ್ನು ಸಮನೆಂದು ಸಿದ್ಧವಾಯಿತು. ಅಂದಮೇಲೆ ಸಮಾ ಎಂದಾಕ್ಷಣ ಎಲ್ಲಾ ಒಂದೇ ಅಂತ ಹೇಳಲು ಬರುವುದಿಲ್ಲ.

ಶ್ರೀಮದ್ಭಾಗವತ ಸಪ್ತಮ ಸ್ಕಂಧ ಆರಂಭದಲ್ಲಿ ಪರೀಕ್ಷಿತರಾಜ ಪ್ರಶ್ನಿಸುತ್ತಾನೆ. "ಸಮಪ್ರಿಯಃ ಸುಹೃತ್ ಬ್ರಹ್ಮನ್ ಭೂತಾನಾಂ ಭಗವಾನ್ ಸ್ವಯಂ । ಇಂದ್ರಸ್ಯಾರ್ಥೇ ಕಥಂ ದೈತ್ಯಾನವಧೀತ್ ವಿಷಮೋ ಯಥಾ ॥" ಭವವಂತನನ್ನು **ಸಮ** ಎಂದೇ ಕರೆಸಿಕೊಳ್ಳುತ್ತಾನೆ ಅಂದರೆ ಸಮಸ್ತ ಪ್ರಾಣಿಗಳಿಗೆ ತತ್ತ ಯೋಗ್ಯತೆಗೆ ಅನುಗುಣವಾಗಿ ಫಲಪ್ರದನಾಗುತ್ತಾನೆ. ಆದ್ದರಿಂದ ಸಮನೆಂದು ಕರೆಸಿಕೊಳ್ಳುತ್ತಾನೆ. ಇದನ್ನೇ ಗೀತೆಯಲ್ಲಿ "ಸಮೋಹಂ ಸರ್ವಭೂತೇಷು ನಮೇ ದ್ವೇಷೋಽಹಿ ನ ಪ್ರಿಯಃ"

**ಓಂ ನ ಚ ಪ್ರಯೋಜನತ್ವಾತ್ ಓಂ** (ಸೂತ್ರ ೨-೨-೩೩)

**ಓಂ ವೈಶಮ್ಯನೈರ್ಘೃಣೇನ ಸಾಪೇಕ್ಷತ್ವಾತ್ತ ದೀಃ ದರ್ಶಯತಿ ಓಂ** (ಬ್ರಹ್ಮಸೂತ್ರ ೨-೨-೩೪)

ಶ್ರೀಮನ್ನಾರಾಯಣನು ಯಾವ ಪ್ರತಿಫಲಾಪೇಕ್ಷೆ ಇಲ್ಲದೇ ಸೃಷ್ಟ್ಯಾದಿ ಕಾರ್ಯಗಳು ಅವನ ಸ್ವರೂಪ ಗುಣವೇ ಆಗಿರುವುದು. ಕಣ್ಣಿನ ರೆಪ್ಪೆ ಹೊಡೆಯಬೇಕಾದರೆ ಕಣ್ಣಿಗೆ ಫಲಾಪೇಕ್ಷೆ (ಪ್ರಯೋಜನವಿರುವುದಿಲ್ಲ) ಅಂತೆಯೇ ಶ್ರೀ ಆನಂದಾ ಉದ್ರೇಕವು ಸುಶ್ರಾವ್ಯ ಸಂಗೀತ ಗಾನದಿಂದ ಆಗುವುದೋ ಹಾಗೆ ಸ್ವಪ್ರಯೋಜನರಹಿತನು.

ಇನ್ನು ಭಗವಂತ ಸೃಷ್ಟಿ ಮಾಡಬೇಕಾದರೆ ಕೆಲವರಿಗೆ ದುಃಖ, ಕೆಲವರಿಗೆ ಆನಂದ. ಬಡವ, ಧನವಂತ, ಕುಂಟ, ಕುರುಡ ಎಂದಾಗಿ ಪಕ್ಷಪಾತ ಇದ್ದಂತೆ ಕಾಣುತ್ತೇವಲ್ಲಾ ? **ಇದು ಅವನಲ್ಲವೇ ?** ಒಂದು ದೋಷದಂತೆ ಕಾಣುತ್ತದೆ. ಎಲ್ಲರನ್ನೂ ಒಂದೇ ರೀತಿ ಸೃಷ್ಟಿ ಏಕೆ ಮಾಡಲಿಲ್ಲ ? ಆದ್ದರಿಂದ ಅವನಲ್ಲಿ ದ್ವೇಷ, ಕ್ರೂರತೆ ಇದೆಯಲ್ಲಾ ? ಅಂತ ಆಕ್ಷೇಪಕ್ಕೆ ಸೂತ್ರ ಹೊರಟಿದೆ.

ಜೀವರ ಆಯಾ ಕರ್ಮಾನುಸಾರ ಫಲದಾತನೇ ಹೊರತು ಭಗವಂತನಿಗೆ ಇವರು ನನ್ನವರು ಅನ್ನುವುದು ಅವರು ದ್ವೇಷಿಗಳು (ಶತೃಗಳು) ಎನ್ನುವುದು ಇರುವುದಿಲ್ಲ.

"ಕರ್ಮಪೇಕ್ಷೆಯಾ ಫಲದಾತೃತ್ವನ್ನ ತಸ್ಯ ವೈಷಮ್ಯ ನೈಘೃಣ್ಯೆ । ಪುಣ್ಯೇನ ಪುಣ್ಯಮ್ ಲೋಕಂನಯತಿ ಪಾಪೇನ ಪಾಪಮ್ ॥" ಎಂಬ ಶೃತಿಯನ್ನು ಶ್ರೀಮದಾಚಾರ್ಯರು ಪ್ರಮಾಣತ್ವೇನ ತಿಳಿಸಿರುತ್ತಾರೆ (ಭಾಷ್ಯ).

ಹೀಗೆ ನಿಜವಾಗಿ ಸಮಾನ (ಸಮಾಜ)ವಾದಿಗಳೆಂದರೆ ಶ್ರೀಮದಾನಂದತೀರ್ಥರೇ ಹೊರತು ಬಾಕೀ ಯಾವ ಮತಾಚಾರ್ಯರು ಇಂತಹ ವಿಷಯ ತಿಳಿಸಿಲ್ಲ. ಮಾನವರೆಲ್ಲ ಒಂದೇ ಅನ್ನುತ್ತಾ ಮೂರ್ಖರನ್ನು ಮೋಸಗೊಳಿಸುತ್ತಾರೆ. ಆಪಾತ ರಮಣೀಯವಾಗಿ ಹೇಳುತ್ತಾರೆ. ಆಗಲಿ, ಕಾರ್ಯಗತ ಮಾಡಿಲ್ಲ. ಮಾಡಲೂ ಆಗುವುದಿಲ್ಲ. Their sayings are misleading to gain popularity ಮಾತ್ರ.

ವೇದಗಳನ್ನು ಒಪ್ಪುತ್ತಾರೆ. ಆದರೆ, ವೇದಗಳಲ್ಲಿ ತಿಳಿಸಿದಂತೆ ಅನುಸರಿಸುವುದಿಲ್ಲ. ಕೆಲವೊಮ್ಮೆ ವಿಪರೀತ ಅರ್ಥ, ಅಪಾರ್ಥ ಮಾಡುತ್ತಾರೆ.

ಇಂತಹ ಅಪಸಿದ್ಧಾಂತವನ್ನು ವೈಷ್ಣವರು ತ್ಯಜಿಸಬೇಕು. ಪವಮಾನಸುತರಾದ ಶ್ರೀಮದಾನಂದತೀರ್ಥರೊಬ್ಬರೇ ಲೋಕ ಗುರುಗಳು (ವಿಶ್ವ ಗುರುಗಳು) "ಶೃಣುತಾಮಲಸತ್ಯವಚಃ ಪರಮಂ ಶಪಥೇರಿತಮುಚ್ಛ್ರಿತಬಾಹುಯುಗಮ್ । ನ ಹರೇಃ ಪರಮೋ ನ ಹರೇಃ ಸದೃಶಃ ಪರಮಃ ಸ ತು ಸರ್ವಚಿದಾತ್ಮಗಣಾತ್ ॥ ಎಂದು ಘಂಟಾಘೋಷವಾಗಿ ದಿಟವನ್ನು ಹೇಳಿ ಸನ್ಮಾರ್ಗ ದೀಪಕರಾದವರು. ಸ್ವರೂಪೋದ್ಧಾರಕರು ಎಂದು ಗಟ್ಟಿಯಾಗಿ ನಂಬಬೇಕು.

ಶ್ರೀಹರೇ ಪ್ರೀತುರ್ಭವತು

**ಬದರೀನಾಥಾಚಾರ್ಯ ಘೂಳೀ**